# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 954 (966)

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಿಂದ (ಜುಲೈ 2026 ಅಂತ್ಯದವರೆಗೆ) ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗೆ ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಮೀಸಲಿಟ್ಟ ಮತ್ತು ಬಿಡುಗಡೆಗೊಳಿಸಿದ ಅನುದಾನ ಎಷ್ಟು; ಯಾವ ಉದ್ದೇಶಕ್ಕೆ ಅನುದಾನವನ್ನು ಬಳಕೆ ಮಾಡಿಕೊಳ್ಳಲಾಗಿದೆ; | ಕಳೆದ ಮೂರು ವರ್ಷಗಳಿಂದ ಎಂದರೆ 2023-24, 2024-25, 2025-26 ಮತ್ತು ಜುಲೈ 2026 ರ ಅಂತ್ಯದವರೆಗೆ ತೋಟಗಾರಿಕೆ ಇಲಾಖೆಗೆ ಮೀಸಲಿಟ್ಟ ಅನುದಾನ ರೂ. 3651.28 ಕೋಟಿ ಮತ್ತು ಬಿಡುಗಡೆಗೊಳಿಸಿದ ಅನುದಾನ ರೂ. 3496.68 ಕೋಟಿ.<br><br>ಈ ಕೆಳಕಂಡ ಉದ್ದೇಶಕ್ಕಾಗಿ ಅನುದಾನವನ್ನು ಬಳಕೆ ಮಾಡಿಕೊಳ್ಳಲಾಗಿದೆ.<br><br>1. ರೈತರಿಗೆ ತೋಟಗಾರಿಕಾ ಬೆಳೆಗಳ ವಿಸ್ತರಣೆ ಹೆಚ್ಚಿಸಲು ಸಹಾಯಧನ.<br>2. ಸೂಕ್ಷ್ಮ ನೀರಾವರಿ — ಡ್ರಿಪ್ ಮತ್ತು ಸ್ಪ್ರಿಂಕ್ಲರ್ ವ್ಯವಸ್ಥೆಗಳಿಗೆ ಸಹಾಯಧನ.<br>3. ಸಂರಕ್ಷಿತ ಬೇಸಾಯ, ಹಳೆಯ ತೋಟಗಳ ಪುನಶ್ಚೇತನ, ಸಾವಯವ ಕೃಷಿ, Integrated Nutrient Management/Integrated Pest Management, ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ಮೂಲಸೌಕರ್ಯ ಅಭಿವೃದ್ಧಿ.<br>4. ಶೀತಲ ಸಂಗ್ರಹಣಾ ಘಟಕಗಳು, ತೋಟಗಾರಿಕಾ ಮಾರುಕಟ್ಟೆ ಮತ್ತು ಸಂಸ್ಕರಣಾ ಮೂಲ ಸೌಕರ್ಯ ಸ್ಥಾಪನೆ.<br>5. ನಿಗಮ ಮತ್ತು ಮಂಡಳಿಗಳ ಚಟುವಟಿಕೆಗಳು<br>6. ಜೇನು ಸಾಕಾಣಿಕೆ<br>7. ಯಾಂತ್ರಿಕರಣಕ್ಕೆ ಸಹಾಯಧನ<br>8. ತಾಳೆ ಎಣ್ಣೆ ಬೇಸಾಯಕ್ಕೆ ಸಹಾಯಧನ<br>9. ತೋಟಗಾರಿಕಾ ವಿಶ್ವವಿದ್ಯಾಲಯ ಮತ್ತು ಸಂಬಂಧಿತ ಮೂಲಸೌಕರ್ಯ ಅಭಿವೃದ್ಧಿ.<br>10. ಮಳೆ ನೀರು ಸಂಗ್ರಹಣೆ ಘಟಕಗಳ ಸ್ಥಾಪನೆಗೆ ನೆರವು.<br>11. ಪ್ರಚಾರ, ತರಬೇತಿ ಸಾಹಿತ್ಯ ಪ್ರಕಟಣೆ.<br><br>ರೇಷ್ಮೆ ಇಲಾಖೆಗೆ ಮೀಸಲಿಟ್ಟ ಅನುದಾನ ರೂ. 1991.52 ಕೋಟಿ ಮತ್ತು ಬಿಡುಗಡೆಗೊಳಿಸಿದ ಅನುದಾನ ರೂ. 1595.03 ಕೋಟಿ. |

| | | |
|---|---|---|
| | | ಈ ಕೆಳಕಂಡ ಉದ್ದೇಶಕ್ಕಾಗಿ ಅನುದಾನವನ್ನು ಬಳಕೆ ಮಾಡಿಕೊಳ್ಳಲಾಗಿದೆ.<br><br>1) ರೇಷ್ಮೆ ಹುಳು ಸಾಕಾಣಿಕ ಮನೆ / ಶೆಡ್, ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ನಿರ್ವಹಣೆ / ರೇಷ್ಮೆ ಹುಳು ಸಾಕಾಣಿಕೆಗೆ ಸಲಕರಣೆಗಳು, ಚಾಕಿ ವೆಚ್ಚಕ್ಕೆ ಸಹಾಯಧನ ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಸಾಗಾಣಿಕಾ ವೆಚ್ಚದ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>2) ರೇಷ್ಮೆ ಹುಳು ಸಾಕಾಣಿಕಾ ಮನೆ, ಹಿಪ್ಪುನೇರಳೆ ತೋಟ ನಿರ್ವಹಣೆ / ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳಿಗೆ ಸಹಾಯಧನ ಹಾಗೂ ಸೋಂಕು ನಿವಾರಕಗಳನ್ನು ಪೂರೈಕೆ ಮಾಡಲಾಗುತ್ತಿದೆ.<br>3) ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ.<br>4) ಮೈಸೂರು/ದ್ವಿತಳಿ ಬಿತ್ತನೆ ಗೂಡಿಗೆ ಬೋನಸ್ ಮತ್ತು ಪ್ರೋತ್ಸಾಹಧನ ಹಾಗೂ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ದ್ವಿತಳಿ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>5) ಹಿಪ್ಪುನೇರಳೆ ನಾಟಿ, ಮರಗಡ್ಡಿ ನಾಟಿ ಕಾರ್ಯಕ್ರಮಗಳಿರುತ್ತವೆ.<br>6) ರೇಷ್ಮೆ ಬೆಳೆಗಾರರಿಗೆ ಹೊಸದಾಗಿ ಹಿಪ್ಪುನೇರಳೆ ನಾಟಿ ಮತ್ತು ನರ್ಸರಿ ಮಾಡುವ ಬೆಳೆಗಾರರಿಗೆ ಸಹಾಯಧನ ನೀಡಲಾಗುತ್ತಿದೆ.<br>7) ಜೊತೆಗೆ ವಸ್ತು ಪ್ರದರ್ಶನ, ಕಾರ್ಯಗಾರ, ವಿಚಾರ ಸಂಕಿರಣ, ಅಧ್ಯಯನ ಪ್ರವಾಸ, ಕರಪತ್ರ, ಕೈಪಿಡಿ ಮುದ್ರಣ ಮತ್ತು ಕ್ಷೇತ್ರೋತ್ಸವ, ಸೋಂಕು ನಿವಾರಕಗಳ ವಿತರಣೆ ಕಾರ್ಯಕ್ರಮಗಳಿರುತ್ತವೆ.<br>8) ಉತ್ಪಾದನೆ / ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ ಕಾರ್ಯಕ್ರಮವಿರುತ್ತದೆ. |
| ಆ) | ಕಳೆದ ಮೂರು ವರ್ಷಗಳಿಂದ (ಜುಲೈ 2026 ಅಂತ್ಯದವರೆಗೆ) ಪ್ರಸ್ತುತ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಿಂದ ಜಾರಿಯಲ್ಲಿರುವ ಯೋಜನೆಗಳು ಯಾವುವು; ಯೋಜನೆಗಳಿಗೆ ಮೀಸಲಿಟ್ಟ, ಬಿಡುಗಡೆಗೊಳಿಸಿದ ಮತ್ತು ಖರ್ಚಾದ ಅನುದಾನವೆಷ್ಟು; | ಕಳೆದ ಮೂರು ವರ್ಷಗಳಿಂದ (ಜುಲೈ 2026 ಅಂತ್ಯದವರೆಗೆ) ಪ್ರಸ್ತುತ ತೋಟಗಾರಿಕೆ ಇಲಾಖೆಯಿಂದ ಜಾರಿಯಲ್ಲಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ.<br><br>**A. ಕೇಂದ್ರ ನೆರವಿನ ಯೋಜನೆಗಳು**<br><br>1. ಪಿಎಂಕೆಎಸ್ ವೈ- ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ<br>2. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ(ಕೃಷೋನ್ನತಿ ಯೋಜನೆ)<br>3. Dharti Abha Janajatiya Gram Utkarsh Abhiyan (Pradhan Mantri janjatiya Unnat Gram Abhiyan) |

4. ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ.
5. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ- ತಾಳೆ ಎಣ್ಣೆ (NMEO-OP).
6. ಪರಂಪರಾಗತ ಕೃಷಿ ವಿಕಾಸ ಯೋಜನೆ.

**B. ನೋಡಲ್ ಏಜೆನ್ಸಿ ಕೃಷಿ ಇಲಾಖೆಯ ಕೇಂದ್ರ ನೆರವಿನ ಯೋಜನೆಗಳು**

1. ಕೃಷಿ ಯಾಂತ್ರೀಕರಣ ಉಪ ಅಭಿಯಾನ.
2. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ.
3. RKVY- Crop diversification Programme.

**C. ರಾಜ್ಯವಲಯ ಯೋಜನೆಗಳು**

1. ಸಮಗ್ರ ತೋಟಗಾರಿಕಾ ಅಭಿವೃದ್ಧಿ.
2. ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು.
3. ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ.
4. ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ.
5. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ.
6. ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ.
7. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ.
8. ತೋಟಗಾರಿಕೆ ಇಲಾಖೆಯ ಮೂಲಭೂತ ಸೌಕರ್ಯ ಕಾಮಗಾರಿಗಳು.
9. ತೋಟಗಾರಿಕೆ ಮೂಲ ಸೌಲಭ್ಯ ಅಭಿವೃದ್ಧಿ.
10. ದುಡಿಯುವ ಬಂಡವಾಳಕ್ಕಾಗಿ ಹಾಪ್ ಕಾಮ್ಸ್ ಗಳಿಗೆ ಸಾಲ.

**D. ಜಿಲ್ಲಾವಲಯ ಯೋಜನೆಗಳು**

1. ತೋಟಗಾರಿಕೆ ಕಟ್ಟಡಗಳು.
2. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ.
3. ಜೇನು ಸಾಕಾಣಿಕೆ.
4. ಸಮಗ್ರ ತೋಟಗಾರಿಕಾ ಅಭಿವೃದ್ಧಿ.
5. ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ.
6. ಪ್ರಚಾರ ಮತ್ತು ಸಾಹಿತ್ಯ.

ಯೋಜನೆಗಳಿಗೆ ಮೀಸಲಿಟ್ಟ ಅನುದಾನ ರೂ. 3651.28 ಕೋಟಿ ಬಿಡುಗಡೆಗೊಳಿಸಿದ ಅನುದಾನ ರೂ. 3496.68

| | | |
|---|---|---|
| | | ಕೋಟಿ ಮತ್ತು ಖರ್ಚಾದ ಅನುದಾನ ರೂ. 2836.58 ಕೋಟಿ.<br><br>ರೇಷ್ಮೆ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ:-<br><br>**A.** ಕೇಂದ್ರ ಪುರಸ್ಕೃತ ಯೋಜನೆಗಳು<br><br>1. ಪ್ರಧಾನ ಮಂತ್ರಿಕೃಷಿ ಸಿಂಚಾಯಿ ಯೋಜನೆ (PMKSY)<br>2. ಕೇಂದ್ರ ವಲಯ ಯೋಜನೆ – ಸಿಲ್ಕ್ ಸಮಗ್ರ<br><br>**B.** ರಾಜ್ಯ ವಲಯ ಯೋಜನೆಗಳು:-<br><br>1. ರೇಷ್ಮೆ ಅಭಿವೃದ್ಧಿ ಯೋಜನೆ<br>2. ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು – ಯೋಜನೆ<br>3. ರೇಷ್ಮೆ ಉದ್ಯಮಗಳು ಯೋಜನೆ<br><br>**C.** ಜಿಲ್ಲಾ ವಲಯ ಮತ್ತು ತಾಲ್ಲೂಕು ಪಂಚಾಯತ್ ಯೋಜನೆಗಳು<br><br>ಯೋಜನೆಗಳಿಗೆ ಮೀಸಲಿಟ್ಟ ಅನುದಾನ ರೂ. 1991.52 ಕೋಟಿ ಬಿಡುಗಡೆಗೊಳಿಸಿದ ಅನುದಾನ ರೂ. 1595.03 ಕೋಟಿ ಮತ್ತು ಖರ್ಚಾದ ಅನುದಾನ ರೂ. 1430.88 ಕೋಟಿ. |
| ಇ) | 2021-22, 2022-23ನೇ ಸಾಲಿನಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು; ಪ್ರಸ್ತುತ 2023ರಿಂದ ಇಲ್ಲಿಯವರೆಗೆ ಯಾವುದಾದರೂ ಯೋಜನೆಗಳು/ ಸಹಾಯಧನಗಳನ್ನು ರದ್ದುಪಡಿಸಲಾಗಿದೆಯೇ; ರದ್ದುಪಡಿಸಲು ಕಾರಣಗಳೇನು? | 2021-22ನೇ, 2022-2023ನೇ ಸಾಲಿನಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರ ಮೇಲಿನ ಉಪ ಪ್ರಶ್ನೆ ಸಂಖ್ಯೆ (ಅ) ರಲ್ಲಿ ವಿವರಿಸಲಾಗಿದೆ.<br><br>2023 ನೇ ಸಾಲಿನಿಂದ ಇಲ್ಲಿಯವರೆಗೆ ಜಾರಿಯಲ್ಲಿರುವ ಯೋಜನೆ / ಸಹಾಯಧನಗಳನ್ನು ರದ್ದುಪಡಿಸಿರುವುದಿಲ್ಲ. |

ಸಂಖ್ಯೆ: HORTI 474 HGM 2026

**(ಎಸ್. ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು